Reg No. M 1299) Daily & Weekly (Founded 1917

ಸತ್ಯವಾದಿ
SATYAVADI

ಸಂಪುಟ 27 ಸಂಚಿಕೆ 65] ಶನಿವಾರ 25—12—43 [ಕಾಲಾಣೆ

ಇಂಗೆಂಡಿನಲ್ಲೂ ಗಾಂಧೀ ತತ್ವವೇ

ಯೂರೋಪಿನಲ್ಲಿ ಬಾಲಕರಿಗೆ ಆಹಾರವನ್ನು ಕೊಡುವ ವಿಷಯದಲ್ಲಿ ತಮ್ಮ ಅಸುತಾಪ ತೋರಿಸಲು ಬ್ರಿಟನ್ನಿನಲ್ಲಿ ಕೆಲವರು ಡಿಸೆಂಬರ್ 30–31 ರಲ್ಲಿ ಉಪವಾಸ ಮಾಡುವರು. ನೀರನ್ನು ಮಾತ್ರ ಸೇವಿಸುತ್ತಾರೆ! ಅಗೋ. ಇಂಗ್ಲೆಂಡಿನಲ್ಲೂ ಗಾಂಧೀ ತತ್ವ ಬೇರೂರಿತು.

ಂ ಂ

ರಷ್ಯಾದವರು ಈಚೆಗೆ 3 ಜರ್ಮನ್ ಅಧಿಕಾರಿಗಳನ್ನು ಗಲ್ಲಿಗೇರಿಸಿದರಷ್ಟೆ? ತಾವು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವುದಾಗಿ ಜರ್ಮನರು ಹೇಳಲಾರಂಭಿಸಿರುವರು.

ಂ ಂ

ಸೈನ್ಯದ ಚಲನವಲನಗಳನ್ನು ಹೇಳಿದಳೆಂದು ಕೆರಾಬೆಯ ಒಬ್ಬ ಭಾರಿ ಎಂಲಿಟರಿ ಅಧಿಕಾರಿಯ ಪತ್ನಿಯನ್ನು ಕೋರ್ಟಿನವರು ಶಿಕ್ಷಿಸಿರುತ್ತಾರೆ.

ಂ ಂ

ಅಮೇರಿಕಾದ ರೈಲ್ವೇ ಆಡಳಿತವನ್ನು ಸರ್ಕಾರಿಯಾಗಿ ನಡೆಸುವುವೆಂದು ಮಿ॥ ರೂಸ್ವೆಲ್ಟರು ಹೇಳುವರು.

ರಷ್ಯಾದ ರಾಜಧಕ್ಕೆ ತನಗಳನ್ನು ಬದಲಾಯಿಸಬೇಕೆಂದು ಪ್ರೊಫೆಸರ್ ಷಾರವರು ಸೂಚಿಸಿರುವರು.

ಂ ಂ

ಜನಾನಿನಲ್ಲಿ ಎಂಲಿಟರಿಗೆ ಬಲವಂತವಾಗಿ ಸೇರಿಸಿಕೊಳ್ಳುವ ಅವಧಿಯನ್ನು ಇನ್ನೂ 1 ವರ್ಷ ಕಮ್ಮಿ ಮಾಡಿದೆ.

ಂ ಂ

ಅಲಹಾಬಾದಿನ ಒಬ್ಬ ವಕೀಲನು ತನಗೆ ಒಂದು ಹೆಣ್ಣು ಮಗುವಾದುದನ್ನು ತಿಳಿಸದಿರಲು ಆ ವಕೀಲನಿಗೆ ಒಂದು ಆಣೆ ಜುಲ್ಮಾನೆ ವಿಧಿಸಿದರು.

ಮೈಸೂರು ವಾರ್ತೆ (ಸ್ವಂ. ಸು) ಡಿ. 24

ಬೃಂದಾವನದಲ್ಲಿ ಇವತ್ತಿನಿಂದ ಕೆಲವು ದಿನಸಗಳು ದೀಪೋತ್ಸವ ನಡೆಯುತ್ತದೆ.

ಅಕ್ಕಿ ರಾಗಿ ಹಂಚುವ ಕೆಲವು ಡಿಪೋಗಳನ್ನು ಲಷ್ಕರ್ ಮೊಹಲ್ಲಾದಲ್ಲಿ ಜನರು ಲೂಟಿ ಮಾಡಿದರೆಂದು ತಿಳಿಯಬರುತ್ತೆ.

ಶ್ರೀಮನ್ಮಹಾರಾಜರು ಬೆಂಗಳೂರಿಗೆ ದಯಮಾಡಿಸಿರುವರೆಂದೂ, ಅಲ್ಲಿ ಒಂದು ವಾರವಿರುವರೆಂದೂ ತಿಳಿಯಬಂದಿದೆ.

ಮಿತ್ರರ ಭಾರಿ ಧಾಳಿ

ನಿನ್ನೆ ಇಂಗ್ಲೆಂಡಿನಿಂದ 1500 ಅಮೇರಿಕ ವಿಮಾನಗಳು ಫ್ರಾನ್ಸಿನ ಕಲೆ ಪಟ್ಟಣದ ಮೇಲೆ ಹಲ್ಲಾ ಮಾಡಿದವು. ಶತ್ರುಗಳಿಗೆ ವಿಶೇಷ ನಷ್ಟವಾಯಿತು. ಹೀಗೆ ಏಕ ಕಾಲದಲ್ಲಿ ಇಷ್ಟೊಂದು ವಿಮಾನಗಳನ್ನು ಯಾರೂ ದಂಡಯಾತ್ರೆಗೆ ತೆಗೆದುಕೊಂಡು ಹೋಗಿರುವುದಿಲ್ಲ. ಈ ಕಾರ್ಯಾಚರಣೆಯಲ್ಲಿ ಅಮೇರಿಕಾದವರ ಒಂದು ವಿಮಾನವಾದರೂ ನಷ್ಟವಾಗಲಿಲ್ಲ.

ಮುಖ್ಯ ಸೇನಾನಾಯಕತ್ವ

ಅಮೇರಿಕಾದ ಜನರಲ್ ಐಸೆಕ್ ಹೋವರಿಗೆ ಈಗ ಯೂರೋಪಿನ ಸರ್ವ ಶ್ರೇಷ್ಠ ಸೈನ್ಯಾಧಿಕಾರವನ್ನು ಮಿ॥ ರೂಸ್ವೆಲ್ಟರು ಕೊಟ್ಟಿರುವರು. ಇವರು ಇಂಗ್ಲೆಂಡಿನಲ್ಲಿ ತಮ್ಮ ಕಛೇರಿಯನ್ನು ಇಟ್ಟುಕೊಳ್ಳುವರು. ಇವರ ಕೈಕೆಳಗೆ ಜನರಲ್ ಮಾಂಟ್‌ಗೊಮರಿಯವರು ಕೆಲಸ ಮಾಡುವರು.

ಅದೇ ಹಾಡು!

ನ್ನೇ ಕರಾಚಿಯಲ್ಲಿ ಜಿನ್ನಾರವರು ಲ್ ಇಂಡಿಯಾ ಮುಸ್ಲಿಂ ಲೀಗ್ ಅಧಿವೇಶನವನ್ನು ನೆರವೇರಿಸಿದರು. ತಮ್ಮ ಪಾಕಿಸ್ತಾನ್ ಹಾಡನ್ನು ಮತ್ತೆ ಹಾಡಿದರು.

ಅಗಾಧ ಸೈನ್ಯ

ಗ ಪ್ರಪಂಚದ ನಾನಾ ಭಾಗಗಳಿಂ ರಿಕ್ಷ ಸೇನೆಗಳು 18 ಕೋಟಿ ವೆಂದು ಮಿ॥ ರೂಸ್ವೆಲ್ಟರು ದಲ್ಲಿ ತಿಳಿಸಿರುವರು.

ಚಕ್ರವರ್ತಿಗಳ ಸಂದೇಶ

ಈ ದಿನದ ರಾತ್ರಿ 9॥ ಗಂಟೆಗೆ ಚಕ್ರವರ್ತಿಗಳು ಒಂದು ಸಂದೇಶವನ್ನು ಲಂಡನ್ನಿನಿಂದ ಬ್ರಾಡ್‌ಕ್ಯಾಸ್ಟ್ ಮಾಡುವರು.

ಂ ಂ

ರಷ್ಯನ್ನರ ಸಾಹಸ

ರಷ್ಯಾದಲ್ಲಿರುವ ಗರಾಡಾಗ್ ಪಟ್ಟಣವನ್ನು ಉಳಿಸಿಕೊಳ್ಳಲು ಜರ್ಮನರು ಎಷ್ಟು ಪ್ರಯತ್ನ ಮಾಡಿದರೂ ಸಾಗದೆ. ರಷ್ಯನ್ನರ ವಶವಾಯಿತು.

ಂ ಂ

ಸೈನ್ಯ ತರಬೇತು

ಈಗ ರಷ್ಯನ್ನರು ಮಾಸ್ಕೋವಿಗೆ ಉತ್ತರದಲ್ಲಿ ಚಳಿಗಾಲದಲ್ಲಿ ಯುದ್ಧ ಮಾಡಲು ಮೂರೂವರೆ ಲಕ್ಷ ಸೇನೆಗಳನ್ನು ತರಬೇತು ಮಾಡುತ್ತಿದ್ದಾರೆ.

ಂ ಂ

ಇಟಲಿಯಲ್ಲಿ ಕದನ

ಇಟಲಿಯ ಬರೆಟೋನಾ ಬೀದಿಗಳಲ್ಲಿ ಜರ್ಮನರೂ ಮಿತ್ರರೂ ಯುದ್ಧಮಾಡುತ್ತಿರುವರು.

ಂ ಂ

ವೈಸರಾಯರ ಭಾಷಣ

ಮುಂದಿನ ಫೆಬ್ರವರಿ 17 ರಲ್ಲಿ ಸೇರವ ಸೆಂಟ್ರಲ್ ಅಸೆಂಬ್ಲಿ ಮತ್ತು ಕೌನ್ಸಿಲ್ ಆಫ್ ಸ್ಟೇಟ್ ಸಭೆಗಳಲ್ಲಿ ವೈಸರಾಯರು ಭಾಷಣಮಾಡುವರು.

ಂ ಂ

ಸಂಸ್ಕೃತದಲ್ಲಿ ಕಾಗದ

ಜರ್ಮನಿಯಲ್ಲಿ ಭಾರತ ಖೈದಿಗಳಿಗೆ ಸಂಸ್ಕೃತದಲ್ಲಿ ಕಾಗದ ಬರೆಯಲು ಜರ್ಮನ್ ಸರಕಾರ ಒಪ್ಪಿಕೊಂಡಿದೆ.

— Bhaktaraj

ರಾದಲ್ಲಿ

ಷ್ಣುಪಂತ್ ಪಾಗ್ನೀಸ್,
ಸಂತಿ, ಭಿಕ್ಷೆತ- ಮುಬಾರಕ್
ಕಾಂತಿಲಾಲ್, ಬಿಲಿಮೋರಿಯಾ
ಮುಂತಾದವರು ಪಾತ್ರವಹಿಸಿರುವ —

ಕ ರಾ ಜ್"

ಭಕ್ತಿರಸಪ್ರದವಾದ
ಮೋಹ ಹಿಂದೀ ಚಿತ್ರ

ತರಗತಿಗಳು 0-5-0, 0-3-0
ಗತಿಗಳು ಎಂದಿನಂತೆ.

ನ 3 ಆಟಗಳು

ಪ್ರತಿದಿನ 2 ಪ್ರತ್ಯೇಕ ಆಟಗಳು

೧ ನೇ ಆಟ ೬-೩೦ ಕ್ಕೆ .... ೨ ನೇ ಆಟ ೧೦ ಕ್ಕೆ

ಬಾಂಬೆ ಜಿ. ಎ. ಸರ್ಕಸ್

ಸ್ಥಳ — ಜೀವಣ್ಣರಾಯನಕಟ್ಟೆ, ಮೈಸೂರು

೧೦೧ ಆಟಗಾರರು, ೧೦೧ ಮೃಗಗಳು, ೨೪ ಸ್ತ್ರೀಯರ ಜಮ್ನಾಸ್ಟಿಕ್
ಡ್ಯಾಮ್ಸೋಡಲು ಮರೆಯಬೇಡಿ

ಜೀವದ ಮೀನನ್ನು ನುಂಗಿ, ಅದರಮೇಲೆ 2 ಕೊಡ ನೀರನ್ನು ಕುಡಿದ-ಹೊಟ್ಟೆಯಲ್ಲಿರಿಸಿಕೊಂಡು, ನಂತರ ಜೀವಸಹಿತವಾಗಿ ನೀರನ್ನೂ ಹೊಂಗೆ ಬೂರಾ ತೆಗೆಯುವ ಅದ್ಭುತ ಸಾಹಸವನ್ನು ತಪ್ಪದೇ ನೋಡಿರಿ

— ಫ್ಲೈಯಿಂಗ್ ಟ್ರಪೀಸ್ ಆಟವನ್ನು ಜರೂರು ನೋಡಿರಿ. —

Ranjit = Najma

3 ನೇ ವಾರ

ರಣಜಿತ್ ಟಾಕೀಸ್

ಅಶೋಕ ಕುಮಾರ್
ವೀಣಾ — ಸಿತಾರ
ಕುಮಾರ್ — ಯಾಕೂಬ್
ಮುಂತಾದವರು ಪಾತ್ರವಹಿಸಿರುವ

ನಜ್ಲಾ

ಅಮೋಘ ಹಿಂದಿ ಚಿತ್ರ

ಪ್ರತಿ ದಿನ 3 ಆಟಗಳು

ಬದನವಾಳಿಗೆ

ಶ್ರೀಮನ್ಮಹಾರಾಜರವರ ಭೇಟಿ

(ನಮ್ಮ ವಿಶೇಷ ಪ್ರತಿನಿಧಿಯಿಂದ)

21-12-43 ರ ಶನಿವಾರ ಬೆಳಗ್ಗೆ 10-5 ಘಂಟೆಗೆ ಶ್ರೀಮನ್ಮಹಾರಾಜರವರು ದಿವಾನರೇ ಆದಿಯಾಗಿ ಸುಮಾರು 50 ಮಿಕ್ಕ ಪರಿವಾರದೊಡನೆ ಬದನವಾಳ್ ಖಾದೀ ಕೇಂದ್ರಕ್ಕೆ ದಯ ಮಾಡಿಸಿದರು. ಖಾದಿ ಕೇಂದ್ರವು ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದು ಸುತ್ತಮುತ್ತಿನಿಂದ ಸಾವಿರಾರು ಹೆಗ್ಗರು ಮಹಾರಾಜರನ್ನು ದರ್ಶನಮಾಡಲು ಬಂದಿದ್ದರು. ಶ್ರೀಮನ್ಮಹಾರಾಜರು ಖಾದಿ ಕೇಂದ್ರದ ಬಾಗಿಲಿಗೆ ಬಂದ ಕೂಡಲೇ ಅಲ್ಲಿ ನೂರಾರು ಸ್ತ್ರೀಯರು ಚರಕದಿಂದ ನೂಲು ತೆಗೆಯುವುದನ್ನು ನೋಡಿ ಆನಂದಪಟ್ಟರು. ಬಾಗಿಲಿನ ಮುಂದೆ ಹಾಕಿದ್ದ ಸುಂದರವಾದ ಚಪ್ಪರಕ್ಕೆ ಸವಾರಿ ಚಿತ್ತೈಸಿದ ಕೂಡಲೇ ಡಿ॥ ಡೈರೆಕ್ಟರು ಶ್ರೀ ಎಂ. ಎಲ್. ನರಸಿಂಹಯ್ಯಂಗಾರ್ಯರೂ ಮತ್ತು ಖಾದಿ ಕೇಂದ್ರದ ಮುಖ್ಯಾಧಿಕಾರಿಗಳಾದ ಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ಯರೂ ಮಹಾರಾಜರಿಗೆ ಹಾರಾತುರಾಯಿ ಒಪ್ಪಿಸಿದರು. ನಂತರ ಶ್ರೀಮನ್ಮಹಾರಾಜರು ದಿವಾನರೊಡಗೂಡಿ, ಖಾದಿ ಹಾಲಿನಲ್ಲಿ ಸಾಲುಸಾಲಾಗಿ ಸ್ಥಿತಿಯಾರಾದ ಒಟ್ಟೆ, ಕಾಗದ, ಚಾಪೆ ಮುಂತಾದುವುಗಳನ್ನು ನೋಡುತ್ತಾ, ಪ್ರತಿಯೊಂದರ ತಯಾರಿಕೆಯ ಕಾಲ. ಕ್ರಮ, ಮೂಲಾಟ. ಇವುಗಳ ಪ್ರಶ್ನೆ ಹಾಕುತ್ತಾ ಒಂದರು. ಇವಕ್ಕೆಲ್ಲಾ ಅಲ್ಲಿದ್ದ ಮ್ಯಾನೇಜರ್ ಶ್ರೀ ರಾಜಾರಾವಯ್ಯಂಗಾರ್ಯರು ಉತ್ತರ ಕೊಟ್ಟರು. ಅಲ್ಲಿ ಕೈಯಿಂದ ತಯಾರಾದ ತಮಾಷಾಮಾಡುತ್ತಿದ್ದ ಕಡೆಗೆ ಸವಾರಿ ಚಿತ್ತೈಸಿತು. ಬಗೆಬಗೆಯ ಕಾಗದಗಳೂ, ಕವಡುಗಳೂ, ಪ್ಯಾಡುಗಳನ್ನೂ ನೋಡುತ್ತಾ, ಇವುಗಳ ತಯಾರಿಕೆ ವಿಷಯ ಕೇಳುತ್ತಾ ಅಲ್ಲೇ ಒ॥ ನಿಮಿಷ ಕಳೆದರು. ಈ ಇಲಾಖೆಯು ಶ್ರೀ ಟಿ. ಎಸ್. ಗೋವಿಂದರಾಯರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದೆ. ಇಲ್ಲಿಂದ ಸವಾರಿಯು ಹಸೀ ಹೂತಾಳೆಯಿಂದ ನಾರು ತೆಗೆಯುವದನ್ನು ನೋಡಿ ಸಂತೋಷಪಟ್ಟರು. ಸುಮಾರು ಅರ್ಧ ಗಂಟೆ ಖಾದಿ ಕ್ಷೇತ್ರದ ನಾನಾ ಕೈಗಾರಿಕೆಯನ್ನು ನೋಡಿ ತಂಬಾ ಸಂತೋಷಗೊಂಡು ನಂತರ ಚಾಮರಾಜನಗರಕ್ಕೆ ಪ್ರವಾಸ ಮುಂದುವರಿಸಿದರು.

Visit

Sastry's Coffee Rooms
Chamarajapuram
Mysore

Laksbminarasimha
PRESS
Artistic & Colour Printing
a Sspciality
Srirampet, Mysore

ಸತ್ಯವಾದಿ ವಾರದಸಂಚಿಕೆ

ಪ್ರತಿ ಸೋಮವಾರ

ಪರಸ್ಥಳಕ್ಕೆ ಅಂಚೆಚೆಟ್ಟ ಸೇರಿ ವಾರ್ಷಿಕ ಚಂದಾ ರೂ. 1-12-0. ಮನಿಯಾರ್ಡರ್ ಮಾಡಬೇಕು. ವಿ. ಪಿ. ಇಲ್ಲ.

ಶಕ್ತಿಸುಧಾ

ದೇಹದೌರ್ಬಲ್ಯ ಬಲಹೀನತೆ ಇವುಗಳನ್ನು ಹೋಗಲಾಡಿಸಿ ವೀರ್ಯಾಭಿವೃದ್ಧಿ ಮಾಡಿ ದೇಹಕ್ಕೆ ಕಾಂತಿಯನ್ನು ಉಂಟುಮಾಡುತ್ತೆ

ಈವತ್ತೇ ಕೊಂಡು ಉಪಯೋಗಿಸಿರಿ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

೧೦೬೭, ಚಾಮರಾಜಪುರಂ ಮೈಸೂರು.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ದೇಶವಿದೇಶ

ಭಾರತದಲ್ಲಿ 40477 ಮೈಲಿರೈಲು, 623000000 ಪ್ರಯಾಣೀಕರು (1941-1942) 96000000 ಟನ್ ಸಾಮಾನು, 14469000000 ರೂ. ಸಂಪಾದನೆಯಾಗಿ ಧೀ 758000 ರೈಲ್ವೇ ಕೆಲಸಗಾರರು, ವಷ್ಕಕ್ಕೆ 381400000 ರೂ. ಸಂಬಳ.

ಂ ಂ

ರಷ್ಯಾದ ಯುವಕರು ನಮ್ಮ ಹಾಗೆ ಸೋಮಾರಿಯಾಗಿ ಕೂತಿರುವರೇ ? ಈ ಯುವಕರಿಂದಲ್ಲವೇ ಹಿಟ್ಲರ್ ಆಟ ನಡೆಯದಿದ್ದದ್ದು, ಇಂಗ್ಲೆಂಡ್ ಕನ್ನ ವ್ಯಾಣ ಉಳಿಸಿಕೊಂಡದ್ದು. ಅಮೇರಿಕಾದ ಯುವಕರೂ ಕೂಡ ಈಗಿನ ಯುದ್ಧದಲ್ಲಿ ತಮ್ಮ ಯುವಕರು ತಮ್ಮ ಶಕ್ತಿಯನ್ನು ತೋರಿಸುತ್ತಿಲ್ಲವೇ ? ನಮ್ಮ ಯುವಕರ ಏನು ಮಾಡುತ್ತಿದ್ದಾರೆ ?

ಂ ಂ

ಭಾರತ ಸರಕಾರದವರು ಗಾಂಧೀಜಿ ಮುಂತಾದ ಕಾಂಗ್ರೆಸ್ ನಾಯಕರನ್ನು ಬಂಧನದಿಂದ ಬಿಡುವಂತಿಲ್ಲ. ಕಾರಣ ಗಾಂಧೀಜಿಯವರು ಸರ್ದಾರ್ ವಲ್ಲಭಭಾಯಿ ಪಟೇಲರ ಮಾತನ್ನು ಕೇಳದೆಯೇ ಯಾವ [redacted] ಮಾಡುವುದಿಲ್ಲವಂತೆ !

ಂ ಂ

ಒಬ್ಬ ಆಂಗ್ಲೇಯನು ದಕ್ಷಿಣ ಆಫ್ರಿಕಾದ ನೇಟಾಲ್ ಪತ್ರಿಕೆಗೆ, ಹಿಂದೂಗಳು ವರ್ಷಕ್ಕೆ 52 ರೂಪಾಯಿಗಳಲ್ಲಿ ಜೀವನ ಮಾಡುವರು ಎಂದು ಬರೆದಿರುವನು.

ಂ ಂ

ಇಂಡೋರು ಮಹಾರಾಜರು ತಮ್ಮ ನೂತನ ಅಮೇರಿಕ ಹೆಂಡತಿಯನ್ನು ಡೆಲ್ಲೀಗೆ ಕರೆದುಕೊಂಡು ಬಂದಿರುತ್ತಾರೆ. ಇವರ ಉದ್ದೇಶ ಭಾರತ ಸರಕಾರದವರು ಈ ನೂತನ ಪತ್ನಿಯನ್ನು ಮಹಾರಾಣಿ ಎಂದು ಒಪ್ಪಿಕೊಳ್ಳಬೇಕೆಂದು.

ಚರ್ಚಿಲ್ಲರು ಸ್ಟಾಲಿನ್ನರಿಗೆ ಕತ್ತಿಯನ್ನು ಒಪ್ಪುಮಾನ ಮಾಡಿದ್ದಕ್ಕಿಂತ ಲೇಖನಿಗಿಂತ ಕತ್ತಿಯ ಶಕ್ತಿ ಯೇ ಹೆಚ್ಚಲ್ಲವೇ ?

ಂ ಂ

ಜಬ್ಬಲ್ಪುರದಲ್ಲಿ ಒಬ್ಬ ರಾಜಕೀಯ ಖೈದಿಯನ್ನು ಪೊಲೀಸರು ನಿಮಿತ್ತ ಆತನಿಗೆ ಕಳುಹಿಸಿದರು ಆಸ್ಪತ್ರೆಯ ಈ ರಾಜಕೀಯ ಖೈದಿಯ ಪತ್ನಿ ಗಂಡನನ್ನು ನೋಡಲು, ಸರ್ಕಾರದವರು ಇವಳು ಇದೇ ರೀತಿ ನೋಡಿದ ಖೈದಿಯ ಜೈಲು ರೂಲ್ಸು ಮೀರಿ ಶಿಕ್ಷೆಯಾಗುವುದೆಂದು ನೋಟೀಸು ಕೊಟ್ಟಿರುತ್ತಾರೆ.

ಂ ಂ

ಆಹಾರ ಪದಾರ್ಥಗಳನ್ನು ಕಳಿಸಲು ರೈಲ್ವೇ ಜೋರ್ಡಿನವರು ಇನ್ನು ಮುಂದೆ ಗುಡ್ಸ್ ಪಾರ್ಸಲ್ಲುಗಳನ್ನು ಕಳಿಸುವದನ್ನು ಕಮ್ಮಿ ಮಾಡುತ್ತಾ ಅಲ್ಲದೆ ಪ್ರಯಾಣಿಕರು 200 ಮೈಗಿಂತ ಹೆಚ್ಚು ಪ್ರಯಾಣ ಮಾಡುವುದನ್ನು ಸಹಾ ನಿಷೇಧಿಸುತ್ತಾರೆ.

ಂ

ಗದ್ದೆಗಳಲ್ಲಿ, ಅದೂ ಭತ್ತದಲ್ಲಿ ಮೀನನ್ನು ಸಾಕುವುದರಿಂದ ನಿಗೆ ತುಂಬಾ ಆದಾಯವಿದೆ. ಒಂದು ಮೀನು 12 ರಿಂದ ಉದ್ದ ಬೆಳೆಯಲು ಗದ್ದೆಯ ಕೆಲವು ತಿಂಗಳು ಮಾತ್ರ ಇಷ್ಟೇ ಉದ್ದ ಕೊಳ ಎರಡು ವರ್ಷ ಕಾಲ ಭತ್ತದ ಪೈರಿನಲ್ಲಿರುವ ತಿನ್ನುವುದು. ಈ ಪದ್ಧತಿ ನಿನಲ್ಲಿ ಅನೇಕ ವರ್ಷಗಳಿಂದ ತ್ತಿರುವರು.

Do you want to deal with
MALABAR
Wholesale Merchant Commission Agent
— If so Please write to —
C. L. JOSEPH
GENERAL MERCHANT
BIG BAZAAR — —